SRI DHARM SINGH (Minister for Housing and Urban Development).—

(a) Six-Villages. *viz* ;

1	Saladhalli	2	Wandal
3	Ramanalli	4	Nagarhalli
5	Kaldewad	6	Hachyal

(b) No sites were distributed in these villages as it is only in the recent resurvey it is identified that there are 57 siteless persons in these villages.

SRI M. H. BEKINALKAR.—In the answer only the names of six villages have been given. Apart from these six villages, there are some other villages where sites have not been given. Will the Government be pleased to instruct the Deputy Commissioner to include the other four villages also.

† ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ ಈಗಾಗಲೇ ನಾವು ಸಿಂದಗಿ ತಾಲ್ಲೂಕಿನಲ್ಲಿ ಲಘ್ಟ್ ಸೈಟುಗಳನ್ನು ಹಂಚಿದ್ದೇವೆ. ಮತ್ತು ಈಗ ನಮಗೆ ಒಂದಿರುವ ವರ್ತಮಾನದ ಪ್ರಕಾರ ಈ ಹಳ್ಳಿಗಳಲ್ಲಿ ೫೭ ಜನ ನಿವೇಶನ ಇಲ್ಲದವರು ಇದ್ದಾರೆ ಎಂದು ಗೊತ್ತಾಗಿದೆ. ಅವರಿಗೆ ನಿವೇಶನಗಳನ್ನು ಕೊಡಬೇಕೆಂದು ವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಡಲಾಗಿದೆ.

SRI M. H. BEKINALKAR.—The survey of these siteless persons has not been done properly by the Village Accountants because they are under the impression that the sites are to be given only to the SCs and STs and not to other communities who are not having sites So, I request the Government to give clear instructions to the Deputy Commissioner and the Village Accountants to include the names of the siteless persons irrespective of their communities and accordingly, sites be given.

ಶ್ರೀ ಧರ್ಮಸಿಂಗ್.—ಈಗಾಗಲೇ ಹರಿಜನ ಗಿರಿಜನರು ನಿವೇಶನ ಇಲ್ಲದವರು ಯಾರು ಯಾರು ಇದ್ದಾರೆ. ಅವರ ಪಟ್ಟಿಯನ್ನು ತಯಾರು ಮಾಡಿದ್ದಾರೆ. ಜೊತೆಗೆ ಬೇರೆಯವರು ಮನೆ ನಿವೇಶನ ಇಲ್ಲದವರು ಯಾರ್ಯಾರು ಇದ್ದಾರೆ ಅವರ ಹೆಸರುಗಳ ಪಟ್ಟಿಯನ್ನು ತಯಾರು ಮಾಡಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಅಧಿಕಾರಿಗಳು ಮಾಡುತ್ತಾರೆ.

Shifting of Villages near Hemavathi Project

703 SRI H. D. DEVEGOWDA (Holenarasipur).—Will the Chief Minister be pleased to state ;

(a) whether representations have been received by them to shift Hanumanthalli, Hangarahalli, Haralahalli, Kamasamudra and Mavinakere villages in Holenarasipura Taluk as the Hemavathi project canal will pass through the upper parts of these villages which is dangerous to the Health of the people therein :

(b) if so, whether they have already taken necessary steps to shift the above villages ?

SRI R. GUNDU RAO (Chief Minister).—

(a) Representations have not been received, so far to shift the said villages.

(b) This question does not arise in view of reply to clause (a) above.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಸರ್ಕಾರಕ್ಕೆ ಆ ರೀತಿ ಮನವಿಗಳು ಬಂದಿಲ್ಲ ಎಂದು ಹೇಳಿದ್ದೀರಿ ; ಈ ಉತ್ತರವನ್ನು ಮಾನ್ಯ ಮುಖ್ಯ ಮಂತ್ರಿಗಳು ಕಂದಾಯ ಇಲಾಖೆಯಿಂದ ತರಿಸಿದ್ದಾರಾ ಅಥವಾ ನೀರಾವರಿ ಇಲಾಖೆಯಿಂದ ತರಿಸಿದ್ದಾರಾ ? ಇದರ ಬಗ್ಗೆ ನಾನು ಹಲವಾರು ಅರ್ಜಿಗಳನ್ನು ಸರ್ಕಾರಕ್ಕೆ ಕಳಿಸಿದ್ದೇನೆ. ನನಗೆ ಸರ್ಕಾರದಿಂದ ಎಂಡಾರ್ಸ್‌ಮೆಂಟ್ ಬಂದಿದೆ. ಆದರೂ ಸರ್ಕಾರಕ್ಕೆ ಮನವಿಗಳು ಬಂದಿಲ್ಲಾ ಎಂದು ಹೇಳಿದ್ದಾರೆ. ಸರ್ಕಾರಕ್ಕೆ ಯಾವ ಅಧಿಕಾರಿ ಉತ್ತರವನ್ನು ಕಳುಹಿಸುತ್ತಾರೆ ಎಂಬುದನ್ನು ಹೇಳುತ್ತೀರಾ ?

† ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳ ಪರವಾಗಿ).—ಇರಿಗೇಷನ್ನಿಗೆ ಸಂಬಂಧಪಟ್ಟ ಹಾಗೆ ನಾನು ಉತ್ತರ ಕೊಡುತ್ತಿದ್ದೇನೆ. ಮಾನ್ಯ ಸದಸ್ಯರ ಅಭಿಪ್ರಾಯದಂತೆ ಜಿಲ್ಲಾಧಿಕಾರಿಗಳಿಗೆ ಮನವಿಗಳು ಬಂದಿರಬಹುದು.

ಶ್ರೀ ಹೆಚ್. ಡಿ. ದೇವೇಗೌಡ.—ಹೇಮಾವತಿ ರಿಹ್ಯಾಬಿಲಿಟೇಷನ್ ಕಮಿಟಿಯ ಮುಂದೆ ಚರ್ಚೆಯಾಗಿ ಇದರ ಬಗ್ಗೆ ನಿರ್ಣಯ ಮಾಡಿದ್ದೇವೆ. Cachment areaದಲ್ಲಿ ನದಿ ಮತ್ತು ಕಾಲುವೆ ಬದಿಯಲ್ಲಿ ಇರತಕ್ಕ ಗ್ರಾಮಗಳನ್ನು ವರ್ಗಾವಣೆ ಮಾಡಬೇಕು ಎಂದು ತೀರ್ಮಾನವಾಗಿದೆ. ಈಗ ಹಣ ಸ್ವಲ್ಪ ಕಡಿಮೆ ಇರುವುದರಿಂದ ಫಸ್ಟ್ ಸ್ಟೇಜ್ ಮುಳುಗಡೆ ಆದಂತೆ ಆದರ ಒಂದು ಆಧಾರದ ಮೇಲೆ ಇದನ್ನು ತೆಗೆದು ಕೊಳ್ಳುತ್ತೇವೆ ಎಂದು ತಾವೂ ಕೂಡ ಹೇಳಿದ್ದೀರಿ. ಹೀಗಿರುವಾಗ ಸರ್ಕಾರದವರು ಈ ರೀತಿ ಉತ್ತರ ಕೊಟ್ಟರೆ ಗತಿ ಏನು ? What is the source of reply ? How can the Officers give this type of misleading answers ? Is the Minister going to commit himself on the floor of the House like this ?

ಶ್ರೀ ಎಸ್. ಬಂಗಾರಪ್ಪ.—ಇದರಲ್ಲಿ ಎರಡು ವಿಷಯಗಳು ಇವೆ. ಒಂದು ಮನವಿಯ ವಿಷಯ. ಮೆರಿಟ್ ಮೇಲೆ ಇದನ್ನು consider ಮಾಡುವುದಾದರೆ, ಅದರ ಮೇಲೆ ಇದನ್ನು ನೋಡಿದರೂ ಕೂಡ ಈ ಒಂದು ಪ್ರಾಜೆಕ್ಟ್ ಕೆಳಗೆ dry-cum-wet-crop ಬೆಳೆಯತಕ್ಕ ಪ್ರಪೋಸಲ್ ಇರುವುದರಿಂದ ಹಾಗೂ ಈ ಗ್ರಾಮಗಳಿಗೆ ತೊಂದರೆಯಾಗುವುದಿಲ್ಲ ಎಂದು ತಜ್ಞರ ಅಭಿಪ್ರಾಯ ಇರುವುದರಿಂದ The shifting of all the villages to some other place does not arise, ಎನ್ನುವ ಅಭಿಪ್ರಾಯ ಸರ್ಕಾರದ ಮುಂದೆ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ತಜ್ಞರು ಯಾರು ಆ ರೀತಿ ಹೇಳಿದರು ಎಂಬುದನ್ನು ನೋಡಿ examine ಮಾಡಿ ತಜ್ಞರ ಅಭಿಪ್ರಾಯ ಇದ್ದರೆ ಅವರ ರಿಪೋರ್ಟನ್ನು ಈ ಸಭೆಯ ಮುಂದೆ ಇಡುತ್ತೀರಾ ? Sir, I am going to contest. The Hon. Minister should not try to hoodwink us on the floor of the House.

SRI S. BANGARAPPA.—The question of hoodwinking that too in respect of Sri Deve Gowda, does not arise.

ಶ್ರೀ ಎಚ್. ಡಿ. ದೇವೆ ಗೌಡ.—ಮಾನ್ಯ ಸಚಿವರು ಒಂದು ಮಾತನ್ನು ಹೇಳಿದರು ಅಲ್ಲಿ dry-cum-wet-crop ಬೆಳೆಯತಕ್ಕ ಪ್ರಪೋಸಲ್ ಇದೆಯೆಂದು ಅವರು ಹೇಳಿದರು. ಆದರೆ This is the area where the Government has already notified that the wet crop

is going to be allowed. ಯಾರೋ ಹೇಳಿದರು ಎಂದು ಹೇಳುವುದಲ್ಲ. ಯಾವುದೇ ಮಾತನ್ನು ಹೇಳುವಾಗ ಬಹಳ ಜವಾಬ್ದಾರಿಯಿಂದ ಹೇಳಬೇಕು. ಭತ್ತದ ಬೆಳೆ ಇರುವಾಗ ಎಲ್ಲಾ ಹಳ್ಳಿಗಳು ಚಾನಲ್ ಮತ್ತು ನದಿಯ ನೀರಿನಿಂದ ಸುತ್ತುವರಿಯಲ್ಪಟ್ಟಿರುತ್ತದೆ. ಇದರ ಬಗ್ಗೆ ರಿಹ್ಯಾಬಿಲಿಟೇಷನ್ ಕಮಿಟಿಯಲ್ಲಿ ಚರ್ಚೆಯಾಗಿದೆ. ಈಗ ಸದ್ಯಕ್ಕೆ ಹಣ ಇಲ್ಲ, ಆದ್ದರಿಂದ ಈ ಕೆಲಸವನ್ನು programme ಪ್ರಕಾರ ತೆಗೆದುಕೊಳ್ಳೋಣ ಎಂದು ಹೇಳಿದ್ದಾರೆ. ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿದ್ದಾರೆ. ಅವರು ಷಫ್ಟ್ ಮಾಡಿರತಕ್ಕಂಥಾ ಏರಿಯಾವನ್ನು ದರಖಾಸ್ತಿಗೆ ತೆಗೆದುಕೊಂಡು ಬಿಟ್ಟಿದ್ದೀರಿ. ಅಲ್ಲದೆ ಗ್ರಾಮಾಶ್ರಣಕ್ಕೆ ಸೇರಿದ ಏರಿಯಾವನ್ನು ರಿಸರ್ವ್ ಮಾಡಬೇಕು ಎಂದು ಹೇಳಿದುದನ್ನೂ ಸಹ ದರಖಾಸ್ತಿಗೆ ತೆಗೆದುಕೊಂಡು ಬಿಟ್ಟಿದ್ದೀರಿ. ಹಣ ಬಂದ ಮೇಲೆ ಆ ಕೆಲಸಗಳನ್ನು ತೆಗೆದುಕೊಳ್ಳೋಣ ಎಂದು ಹೇಳಿದರೆ ಬಹುಶಃ ಈ ವಿಚಾರ ತಮಗೆ ಗೊತ್ತಿರಲಾರದು ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಹೇಳುವುದೇನೆಂದರೆ ಅಧಿಕಾರಿಗಳು ನಿಮಗೆ ಸರಿಯಾದ ರೀತಿಯಲ್ಲಿ ಇನ್‌ಫರ್ಮೇಷನ್ ತಿಳಿಸಿಲ್ಲ. I do not want to blame the Hon'ble Minister.

SRI S. BANGARAPPA.—You have already blamed.

SRI H. D. DEVE GOWDA.—I am very sorry. The Hon'ble Minister must be in a position to pull them up. ನಾನುಕೂಡ ಈ ಕಮಿಟಿಯಲ್ಲಿ ಇರುವುದರಿಂದ ಈ ಮಾತನ್ನು ಹೇಳಿದ್ದೇನೆ

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ದೇವೇಗೌಡರು ಕಮಿಟಿಯಲ್ಲಿ ಇದ್ದುದರಿಂದ ಅವರ ಅಭಿಪ್ರಾಯ ಏನು ಮತ್ತು ಅವರು ಏನು ಬರೆದಿದ್ದಾರೆ ಎನ್ನುವುದನ್ನು ಇಲ್ಲಿ ತಿಳಿಸಿದ್ದಾರೆ ಅದನ್ನು ನಾನೂ ಸಹ ಒಪ್ಪುತ್ತೇನೆ. ನನ್ನ ಅಭಿಪ್ರಾಯ, ಅದನ್ನು ಬೇರೆ ಕಡೆ ವರ್ಗಾಯಿಸಬೇಕಾದರೆ ಹಣಕಾಸಿನ ತೊಂದರೆ ಇದೆ ಎನ್ನುವುದು. ನಮ್ಮ ಮುಂದೆ ಇರತಕ್ಕಂಥ ವರದಿ ಪ್ರಕಾರ canal alignment ಏನು ಮಾಡಿದ್ದಾರೆ ಅದರಿಂದ ಇದಕ್ಕೆ ಯಾವ ರೀತಿಯಾಗಿಯೂ ಎಫೆಕ್ಟ್ ಆಗುವುದಿಲ್ಲ ಎಂದು ಇರುವುದರಿಂದ ಅದನ್ನೇ ನಾನು ಹೇಳಿದ್ದೇನೆ. ಜೊತೆಗೆ ಅಲ್ಲಿ ಒಂದೇ ಒಂದು ಬೆಳೆ ಇಟ್ಟುಕೊಂಡಿದ್ದಾರೆ. ಅವರು dry-cum-wet crop ಇಟ್ಟುಕೊಳ್ಳಬೇಕು. ಮಾನ್ಯ ದೇವೇಗೌಡರು ೫೦ ಕಿಲೋ ಮೀಟರ್ ಒಳಗಡೆ ಬರತಕ್ಕಂಥಾ ಹಳ್ಳಿಗಳು ಏನು ಇವೆ ಅದರಲ್ಲಿ ಬರೀ ಡ್ರೈ ಮಾತ್ರ ಬರುತ್ತದೆ ಅಂತ ಹೇಳಿದರು. ಅದು ಇರಬಹುದು ಇಲ್ಲ ಅನ್ನುವುದಿಲ್ಲ ಆದರೂ ಸಹ ಈ ಬಗ್ಗೆ Technical opinion ಏನು ಕೊಟ್ಟಿದ್ದಾರೆ ಯಾವ ರೀತಿಯಲ್ಲಿ ಮಾಡಿಕೊಟ್ಟಿದ್ದಾರೆ ಅದನ್ನು ಮತ್ತೊಂದು ಸಾರಿ ನೋಡಿಸೋಣ. ಆ ಗ್ರಾಮಗಳನ್ನು ಸೇರಿಸಿಕೊಂಡರೂ ಕೂಡ ಈ channel alignment ಆಗಲಿ ಅಥವಾ canal alignment ಆಗಲಿ ಏನೂ affect ಆಗುವುದಿಲ್ಲ. ಅಲ್ಲಿಂದ ನೇರವಾಗಿ ನೀರು ಅವರಿಗೆ ಸಿಗದೇ ಇರಬಹುದು ಆದರೆ ಈ ಬಗ್ಗೆ ನನಗೇನೂ ಗೊತ್ತಿಲ್ಲ ಎಂದು ಮಾತ್ರ ಹೇಳಬೇಡಿ, ನನಗೂ ಗೊತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ.—ಇದರ ಬಗ್ಗೆ ವರದಿ ಬಂದಿದೆ. ಆದರೆ ಅದರಲ್ಲಿರುವ ತಜ್ಞರ ಅಭಿಪ್ರಾಯ ಸರಿಯಲ್ಲ ಎಂದು ಹೇಳಿದರೆ ಅದನ್ನು ಬೇಕಾದರೆ ನಾನು ಒಪ್ಪುತ್ತೇನೆ. ನೀವು ಈ ಬಗ್ಗೆ ಮನವಿಗಳು ಬಂದೇ ಇಲ್ಲ ಎಂದರೆ ಹೇಗೆ? ಅಧಿಕಾರಿಗಳು ಏನಾದರೂ ಇದರ ಬಗ್ಗೆ ಚೀಟ್ ಮಾಡಿಸ್ತಿದ್ದಾರೆಯೇ? Representitives of the people have given several representations. You say there is no representation. Who is that officer, who has got the audiaci y to say that there is no representation? The officers must supply the correct information. You cannot preach sermon to me.

ಶ್ರೀ ಎಸ್. ಬಂಗಾರಪ್ಪ.—ಅದನ್ನು ವೆರಿಫೈ ಮಾಡಿಸ್ತೇನೆ.

ಅಧ್ಯಕ್ಷರು.—ಅದನ್ನು ವೆರಿಫೈ ಮಾಡಿಸುತ್ತೇನೆ ಎಂದು ಹೇಳಿದ್ದಾರಲ್ಲಾ ಸ್ವಲ್ಪ ನಿದಾನ ಮಾಡಿ.

ಶ್ರೀ ಎಸ್ ಬಂಗಾರಪ್ಪ—ತಾವು ಮನವಿಗಳನ್ನು ಕೊಟ್ಟಿದ್ದಾರೆ ಎಂದು ಹೇಳಿದ್ದೀರಿ. ಅದನ್ನು ವೆರಿಫೈ ಮಾಡಿಸುತ್ತೇನೆ, ಅಲ್ಲಿಯವರೆಗೆ ಸ್ವಲ್ಪ ತಾಳಿ ಸ್ವಾಮಿ?

SRI H. D. DEVE GOWDA.—If you say that the Technical Report is adverse I bow my head.

ಶ್ರೀ ಎಸ್. ಬಂಗಾರಪ್ಪ —ಸ್ವಾಮಿ, ದಯವಿಟ್ಟು ತಾವು ಇಷ್ಟು ಸಿಟ್ಟು ಮಾತಿಕೊಳ್ಳಬೇಡಿ ನೀವು ಈ ಬಗ್ಗೆ ಮನವಿಗಳನ್ನು ಕೊಟ್ಟಿದ್ದಾರೆ ಎಂದು ಹೇಳಿದ್ದೀರಿ. ಆ ಮನವಿಗಳು ಬಂದಿಲ್ಲ ಎಂದು ನಾವು ಹೇಳಿದ್ದೇವೆ. ಅದಕ್ಕೆ ಮತ್ತೆ ಪ್ರತಿಯಾಗಿ ತಾವು ಮನವಿಗಳನ್ನು ಕೊಟ್ಟಿದ್ದಾರೆ ಎಂದು ಹೇಳಿರುವುದರಿಂದ ನಾನು ಅದನ್ನು ವೆರಿಫೈ ಮಾಡಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ತಮಗೆ ಬೇಕಾದರೆ I will produce the entire files before this House.

ಶ್ರೀ ಎಸ್. ಬಂಗಾರಪ್ಪ ನಾವು ಈ ಬಗ್ಗೆ ಪತ್ರ ಬರೆದಿದ್ದೇವೆ. ಮಾನ್ಯ ದೇವೇಗೌಡರೂ ಕೂ ಈ ಬಗ್ಗೆ ಹೆಚ್ಚಿನ ವಿವರಗಳು ಇದ್ದರೆ ಅದನ್ನೂ ಕೊಡಲಿ, ನಾನು ವಿಚಾರ ಮಾಡಿಸುತ್ತೇನೆ. ಒಂದೇ ಸಾರಿ ತಾವು ಬಂದೂಕ ಹೊಡೆಯುವುದಕ್ಕೆ ಹೋಗಬೇಡಿ.

SRI H. D. DEVE GOWDA. –I am blaming the Officers who have furnished information to this House. ಅಧಿಕಾರಿಗಳು ಇನ್‌ಫರ್ಮೇಷನ್ ಕಳುಹಿಸುವಾಗ ಸರಿಯಾದ ರೀತಿಯಲ್ಲಿ ಕಳುಹಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರಿಗೆ ಬೇಕಾದ ರೀತಿಯಲ್ಲಿ ವಿವರಗಳನ್ನು ತರಿಸಿ ಕೊಡೋಣ. ಸ್ವಲ್ಪ ನಿಧಾನಮಾಡಿ.

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ ಜಲಾಶಯಗಳನ್ನು ನಿರ್ಮಾಣ ಮಾಡುವಾಗ ಯಾವ ಯಾವ ತಾಲ್ಲೂಕಿನಲ್ಲಿ ಯಾವ ಯಾವ ಹಳ್ಳಿಗಳು ಮುಳುಗಡೆಯಾಗುತ್ತದೆ ಎನ್ನುವುದನ್ನು ತಿಳಿದುಕೊಂಡು ಆ ಹಳ್ಳಿಗಳಲ್ಲಿ ಯಾವುದಾದರೂ ಮುಳುಗಡೆಯಾಗುವುದು ಇದ್ದರೆ ಅಂಥಾ ಹಳ್ಳಿಗಳನ್ನು ವರ್ಗಾವಣೆ ಮಾಡಬೇಕು ಎನ್ನುವ ಕಾರ್ಯಕ್ರಮ ಸರ್ಕಾರಕ್ಕೆ ಕೊಟ್ಟಿರತಕ್ಕಂಥಾ ವರದಿಯಲ್ಲಿ ಇಲ್ಲವೇ ? ಒಂದು ವೇಳೆ ಆ ವರದಿಯಲ್ಲಿ ಯಾವ ಯಾವ ಹಳ್ಳಿಗಳು ಮುಳುಗಡೆಯಾಗುತ್ತದೆ ಎನ್ನುವುದೇನಾದರೂ ಕೊಟ್ಟಿದ್ದರೆ ಆ ಹಳ್ಳಿಗಳು ಯಾವ್ಯಾವುವು ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಈ ಬಗ್ಗೆ ಮೊದಲು ಯೋಜನೆ ಮಾಡತಕ್ಕಂಥಾ ಕಾಲದಲ್ಲೇ ಯಾವ ಯಾವ ಗ್ರಾಮಗಳು ಮುಳುಗಡೆಯಾಗುತ್ತವೆ ಎನ್ನುವ ವಿವರಗಳು ಸಿದ್ಧವಾಗುತ್ತದೆ. ಮತ್ತು ಮೊದಲು ಈ ಬಗ್ಗೆ ಸಬ್-ಕೆನಾಲ್ ಹಾಕಬೇಕು ಎಂದು ಏನು ಒಂದು ಕಾರ್ಯಕ್ರಮ ಹಾಕಿಕೊಂಡಿರುತ್ತಾರೋ ಅದು ಬದಲಾವಣೆಗಳು ಆಗುವ ಸಂದರ್ಭವೂ ಉಂಟು. ಮೊದಲು ಈ ಯೋಜನೆ ಮಾಡುವಾಗ ಈ ಒಂದು ಕಾರ್ಯಕ್ರಮ ಇರಲಿಲ್ಲ ಸಬ್-ಕೆನಾಲ್ ಆದಮೇಲೆ ನಂತರ ಮುಂದೆ ಯಾವ್ಯಾವ ಕಡೆ ನೀರು ಬರಬೇಕಾಗುತ್ತದೆ ಎನ್ನುವುದನ್ನು ತಿಳಿದುಕೊಂಡು ಮುಂದೆ ಕೆಲಸಮಾಡುವಾಗ ಈ ರೀತಿಯಾದ ಬದಲಾವಣೆಗಳು ಆಗುವ ಸಂಭವ ಉಂಟು.

ಶ್ರೀ ಕೆ. ಹೆಚ್. ರಂಗನಾಥ್.—ಒಂದು ವೇಳೆ Sub-mersion ಏರಿಯಾಕ್ಕೆ ನೀರು ಅಲ್ಲಿಂದ ಬಿಟ್ಟರೆ ಆ ಸೀಪೇಜ್ ವಾಟರ್‌ನಿಂದ ಆ ಗ್ರಾಮದ ಜನರ ಆರೋಗ್ಯಕ್ಕೆ ಹಾನಿಕರವಾಗುತ್ತದೆ ಎನ್ನುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಸ್. ಬಂಗಾರಪ್ಪ.—ಆ ನೀರು sub-merison areaಕ್ಕೆ ಬರುವುದಿಲ್ಲ. ಆ ನೀರು ಕೆನಾಲ್‌ಗೆ ಬರುತ್ತದೆಯೇ ವಿನಾ ಇನ್ನೆಲ್ಲಿಗೂ ಹೋಗುವುದಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ನೀರು ಅಲ್ಲಿಂದ ಒಂದೆರಡು ತಾಲ್ಲೂಕಿಗೆ ಬರಬಹುದು. ಮತ್ತೆ ಆ ನೀರು ಮುಂದಕ್ಕೆ ಬಿಟ್ಟರೆ, ಅಲ್ಲಿ ಬರತಕ್ಕಂಥಾ ಸೀಪೇಜ್ ವಾಟರ್‌ನಿಂದ ಆ ಗ್ರಾಮಗಳ ಜನರ ಆರೋಗ್ಯಕ್ಕೆ ಕೊಂದರೆಯಾಗುವುದಿಲ್ಲವೇ ? ಒಂದು ವೇಳೆ ಈ ವಿಷಯ ತಮ್ಮ ಗಮನಕ್ಕೇನಾದರೂ ಬಂದಿದ್ದರೆ ಯಾವ ಯಾವ ಹಳ್ಳಿಗಳು ಈ ಪರಿಸ್ಥಿತಿಯಲ್ಲಿವೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರಾದ ಶ್ರೀ ರಂಗನಾಥ್‌ರವರು ಈ ಬಗ್ಗೆ ಪ್ರಶ್ನೆ ಏನು ಕೇಳಿದ್ದಾರೆ ಅದು ಒಳ್ಳೆಯ ಸರಿಯಾದಂಥಾ ಪ್ರಶ್ನೆಯಾಗಿದೆ ಅಲ್ಲದೇ ಅದು ಸರಿಯಾದಂಥಾ ರಿಲೆವೆಂಟ್ ಪ್ರಶ್ನೆಯೂ ಸಹ ಆಗಿದೆ. ಆದುದರಿಂದ ಮಾನ್ಯ ಮಂತ್ರಿಗಳು ಅವರು ಕೇಳಿದಂಥಾ ಪ್ರಶ್ನೆಗೆ ಸರಿಯಾಗಿ ವಿವರಣೆಗಳನ್ನು ಕೊಡಬೇಕು ಎಂದು ಕೇಳುತ್ತೇನೆ. ತಮಗೆ ಹೇಳಬೇಕಾದರೆ ಇದರಲ್ಲಿ ಒಂದು

ಗ್ರಾಮವು ಏನು ಇದೆ ಅದನ್ನು ಅಧಿಕಾರಿಗಳು ಬಿಡಬೇಕು ಎಂದು ಹೇಳಿದರೂ ಕೂಡ ಆ ಗ್ರಾಮದವರು ಆ ಊರನ್ನು ಬಿಡುವುದಿಲ್ಲ ಎಂದು ಪ್ರತಿಭಟನೆ ಮಾಡಿದ್ದಾರೆ. ಆ ಇಲಾಖಾ ಅಧಿಕಾರಿಗಳನ್ನು ಅಲ್ಲಿ ಕೆಲಸ ಮಾಡಿಸುವುದಕ್ಕೆ ಆ ಜನರು ಒಟ್ಟಿಲ್ಲ. ಇಂತಹ ಸನ್ನಿವೇಶ ಉಂಟಾಗಿ ಕೊನೆಗೆ ಆ ಗ್ರಾಮದವರೂ ಸಹ ನನ್ನ ಹತ್ತಿರ ಬಂದರು. ಅಧಿಕಾರಿಗಳೂ ಸಹ ನನ್ನ ಹತ್ತಿರ ಬಂದು ಈ ಕೆಲಸ ನಿಂತು ಹೋಗುತ್ತದೆ. ಏನಾದರೂ ಮಾಡಿ ಈ ಕೆಲಸ ಮುಂದುವರೆಸುವಂತೆ ಮಾಡಿಕೊಡಿ ಎಂದು ಹೇಳಿದರು. ಫಸ್ಟ್ ಸ್ಟೇಜ್‌ಗೆ ಕೊಟ್ಟಿರುವ ಹಣದಲ್ಲಿ ಈ ಕೆಲಸ ಮಾಡದೇ ಹೋದರೆ ಡ್ಯಾಮೇಜ್ ಆಗಿ ಬಿಡುತ್ತದೆ ನಂತರ ಮುಂದಿನ ಕೆಲಸಗಳಿಗೆ ಕಷ್ಟವಾಗುತ್ತದೆ. ಈ ಕೆಲಸವನ್ನು ಮುಂದುವರಿಸುವಂತ ಅವಕಾಶ ಮಾಡಿಕೊಡಿ ಎಂದು ಅಧಿಕಾರಿಗಳು ಹೇಳಿದರು. ನಂತರ ನಾವು ಆ ಗ್ರಾಮದ ಜನರನ್ನು ಕರೆಸಿ ಅವರಿಗೆ ಈ ವಿಚಾರವೆಲ್ಲ ವಿವರವಾಗಿ ಹೇಳಿದ ಮೇಲೆ ಅದಕ್ಕೆ ಅವರು ಒಪ್ಪಿಕೊಂಡರು. ಈಗ ನಿಮ್ಮ ವರದಿ ಪ್ರಕಾರ ಮೊದಲು ಸಬ್‌ಮರ್ಷನ್ ವಿರಿಯಾದಲ್ಲಿರುವ ಕೆಲಸಗಳನ್ನು ತೆಗೆದುಕೊಂಡು ನಂತರ ಇದು ಪೂರ್ಣಸಿದ ಮೇಲೆ ಆ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುವುದಾದರೆ I do not wound the feelings of the Hon'ble Minister. ಆದುದರಿಂದ ದಯವಿಟ್ಟು ಆ ವರದಿಯಲ್ಲಿ ಏನು ಇದೆ ಎನ್ನುವುದನ್ನು ತರಿಸಿ ನೋಡಿ.

ಶ್ರೀ ಎಸ್. ಬಂಗಾರಪ್ಪ.—ಆ ವರದಿಯಲ್ಲಿ ಏನು ಇರಬಹುದು ಎನ್ನುವುದನ್ನು ತರಿಸಿ ವಿಚಾರ ಮಾಡುತ್ತೇನೆ. ಇನ್ನು ಶ್ರೀಮಾನ್ ಕೆ. ಹೆಚ್ ರಂಗನಾಥ್‌ರವರು ಹೇಳಿದ್ದನ್ನೂ ಕೇಳಿದೆ. ಈ ಸೀವೇಜ್ ವಾಟರ್ ಇಂಥಿಂಥಾ ಕಡೆ ಬರುತ್ತದೆ ಎನ್ನುವುದು ಯಾವ ವರದಿಯಲ್ಲೂ ಇಲ್ಲ. ಮೇಲಾಗಿ ಸೀವೇಜ್ ವಾಟರ್ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ. ಈಗ ಬಂದಿರತಕ್ಕಂಥ ಪ್ರಶ್ನೆ ಈ ಕೆನಾಲ್ ಮಾಡುವುದಕ್ಕೆ ಲೈನಿಂಗ್ಸ್‌ನ್ನು ಎಲ್ಲಿ ಹಾಕಬೇಕು ಎನ್ನುವುದು. ಆದುದರಿಂದ ಈ ಕಾರ್ಯಕ್ರಮಗಳಿಂದ ಯಾವ ಗ್ರಾಮಗಳಿಗೂ ದಕ್ಕೆ ಬರುವುದಿಲ್ಲ ಎಂಬ ಅಭಿಪ್ರಾಯವಿದೆ. ಶ್ರೀಮಾನ್ ದೇವೇಗೌಡರು ಏನು ಇದನ್ನು ಇಲಾಖೆಯವರು ಯೋಜನೆ ಮಾಡಲಿಲ್ಲ. ಆ ಗ್ರಾಮದ ಜನರಿಂದ ಈ ರೀತಿ ತೊಂದರೆಯಾಗುತ್ತದೆ ಎಂದು ಒತ್ತಡ ಬಂದ ಮೇಲೆ ಇದಕ್ಕೆ ಗಮನ ಕೊಟ್ಟರು ಎಂದು ಹೇಳುತ್ತಾರೆ. ಅದನ್ನು ವಿಚಾರ ಮಾಡೋಣ.

ಶ್ರೀ ಕೆ ಹೆಚ್. ರಂಗನಾಥ್.—ಸ್ವಾಮಿ, ಈ ಹೇಮಾವತಿ ಚಾನಲ್ಸ್‌ನಿಂದ ಎಲ್ಲೆಲ್ಲಿ ಫೀಡರ್ ಚಾನಲ್ಸ್ ಬರುತ್ತದೋ ಅಲ್ಲಿ ಸಿಮೆಂಟ್ ಲೈನಿಂಗ್ ಮಾಡಬೇಕು, ಅಲ್ಲದೆ ಮೈನ್ ಚಾನಲ್ಸ್ ಮತ್ತು ಸಬ್ ಚಾನಲ್, ಎಲ್ಲೆಲ್ಲಿ ಬರುತ್ತದೋ ಅಲ್ಲೂ ಕೂಡ ಸಿಮೆಂಟ್ ಲೈನಿಂಗ್ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಸರಕಾರದವರು ಏನಾದರೂ ತೀರ್ಮಾನ ತೆಗೆದುಕೊಂಡಿದ್ದಾರೆಯೇ ?

ಶ್ರೀ ಎಸ್. ಬಂಗಾರಪ್ಪ.—ಆ ವಿವರಗಳು ಈಗ ನನ್ನ ಹತ್ತಿರ ಇಲ್ಲ.

ಶ್ರೀ ಕೆ. ಹೆಚ್. ರಂಗನಾಥ್. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಾಳೆ ದಿವಸ ಇದರಿಂದ ಏನಾದರೂ ತೊಂದರೆಯಾಗಬಹುದು. ಆದುದರಿಂದ ಈಗೋತ್ತೇ ಅದನ್ನು ಯೋಚನೆ ಮಾಡಿ ಆ ಕೆಲಸ ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಎಸ್ ಬಂಗಾರಪ್ಪ —ಅದರ ಬಗ್ಗೆ ಸಂಪೂರ್ಣ ವಿವರಗಳು ಈಗ ಇಲ್ಲ. ನನ್ನ ಹತ್ತಿರ ವಿವರಗಳು ಇದ್ದರೆ ಹೇಳುತ್ತಿದ್ದೆ ಚಾನಲ್ಸ್‌ಗೆ ಲೈನ್ ತೆಗೆದುಕೊಳ್ಳುತಕ್ಕಂಥ ಕೆಲಸವಾಗಲಿ ಸಬ್ ಚಾನಲ್ಸ್‌ಗೆ ಲೈನ್ ತೆಗೆದುಕೊಳ್ಳುವುದಾಗಲಿ ಆ ಕೆಲಸದ ಬಗ್ಗೆ ವಿವರಗಳು ನನ್ನ ಹತ್ತಿರ ಇಲ್ಲ. ಆ ಕೆಲಸ ಏನಾದರೂ ತೆಗೆದುಕೊಂಡರೆ ಅದನ್ನು ಸೆಕೆಂಡ್ ಸ್ಟೇಜ್‌ಗೆ ತೆಗೆದುಕೊಳ್ಳಬೇಕಾಗುತ್ತದೆ; ಒಟ್ಟಿನಲ್ಲಿ ನನ್ನ ಅಭಿಪ್ರಾಯ. ಒಂದೇ ಸಾರಿ ಎಲ್ಲವನ್ನೂ ತೆಗೆದುಕೊಂಡರೆ ಸಿಮೆಂಟ್ ಲೈನಿಂಗ್ ಮಾಡುವುದಕ್ಕಾಗುವುದಿಲ್ಲ ಬಹುಶಃ ಚಾನಲ್ಸ್ ಪಕ್ಕದಲ್ಲಿ ತೆಗೆದುಕೊಳ್ಳುವಂಥಾ ಕೆಲಸದಲ್ಲಿ ಸೀಪೇಜ್ ವಾಟರ್ ಬರುವುದಿಲ್ಲ ಎನ್ನುವ ಅಭಿಪ್ರಾಯವನ್ನು ಇಲಾಖೆಯವರು ಇಟ್ಟುಕೊಂಡಿದ್ದಾರೆ. ಶ್ರೀಮಾನ್ ಕೆ. ಹೆಚ್. ರಂಗನಾಥ್‌ರವರು ಅಲ್ಲಿ ನೀರು ಬಿಟ್ಟಾಗ ಆ ನೀರು ಗದ್ದೆಯಲ್ಲಿ ಹಾದು ಮುಂದಕ್ಕೆ ಹೋದಾಗ ಅಥವಾ ಹೊರವಲಯಕ್ಕೆ ಹರಿದುಕೊಂಡು ಹೋದಾಗ ಅದರಲ್ಲಿ ಸೀಪೇಜ್ ವಾಟರ್ ಬಂದೇ ಬರುತ್ತದೆ, ಅದರಿಂದ ಆ ಜನರ ಆರೋಗ್ಯಕ್ಕೆ ತೊಂದರೆಯಾಗುತ್ತದೆ, ಇದನ್ನು ಗಮನಿಸಬೇಕು ಎಂದು ಹೇಳಿದ್ದಾರೆ. ಅವರು ಹೇಳಿದಂತೆ ಇದು ಗಮನಿಸಬೇಕಾದ ವಿಷಯವೇ.

ಶ್ರೀ ಎಚ್ ಡಿ. ದೇವೇಗೌಡ. ಈಗ ಮಾನ್ಯ ರಂಗನಾಥ್ ಅವರು ರಿಲೆವೆಂಟ್ ಪ್ರಶ್ನೆಯನ್ನು ಕೇಳಿದ್ದಾರೆ. The entire villages are going to be surrendered by channel and river water. In the light of this problem that has been posed

before the Government will the Hon'ble Minister give us an assurance to the effect that Goverument will reexamine this issue and take a final decision in this matter ?

ಶ್ರೀ ಎಸ್. ಬಂಗಾರಪ್ಪ.—ಈಗ ಮಾನ್ಯ ದೇವೇಗೌಡರು ಒಂದು ಗ್ರಾಮದ ಜನರ ಅಭಿಪ್ರಾಯ ಏನಿದೆ ಎಂಬುದನ್ನು ಹೇಳಿದ್ದಾರೆ, ಅವರು ಈ ವಿಚಾರದಲ್ಲಿ ಏನು ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ, ಇದರ ಬಗ್ಗೆ ನಮ್ಮ ಅಧಿಕಾರಿಗಳಿಗೆ ಆದೇಶ ಕೊಟ್ಟು ಮತ್ತೊಂದು ಸಲ ವಿಚಾರ ಮಾಡಿಸುತ್ತೇವೆ. ಮತ್ತು ಏನು ಕ್ರಮ ಕೈಗೊಳ್ಳಬೇಕೋ ಆದನ್ನು ಕೈಗೊಳ್ಳುತ್ತೇನೆ.

ಶ್ರೀ ಎಂ. ಮಾದಯ್ಯ.—ಸ್ವಾಮಿ, ನನ್ನ ಪ್ರಶ್ನೆ ಏನಾಯಿತು ?

ಅಧ್ಯಕ್ಷರು.—ತಮ್ಮ ಳಿಕನೇ ನಂಬರಿನ ಪ್ರಶ್ನೆಯನ್ನು ಸಂಬಂಧಪಟ್ಟ ಮಂತಿ ಗಳು ಇಲ್ಲದಿರುವ ಕಾರಣ ತಡೆಹಿಡಿದಿದ್ದೇನೆ.

ಇಲ್ಲಿಗೆ ಪ್ರಶ್ನೋತ್ತರ ಕಾಲ ಮುಗಿಯಿತು.

Question For the Day
(but not taken up)

Expenditure to raise one acre plantation.

433 SHRI KHADIDAL DIWAKAR (Thirthahalli).—Will the Chief Minister be please to state :—

(a) the expenditure that the Government is incurring for raising one acre of plantation of Teak, Nilgiri and Softwood Trees;

(b) the Expenditure, according to the Schedule of rates, that the Government is expected to incur to raise one acre, plantation trees as mentioned above;

(c) whether any instances have come before the Government that inspite of incurring expenditure as above, many plantations have been de troyed;

(d) if so, whether any action has been taken on the concerned authorities ?

SRI R. GUNDU RAO (Chief Minister).—

(a) Teak : Rs. 114 to Rs. 322 per acre Eucalyptus : Rs. 238 to Rs. 580 p.a.. Softwood : Rs. 209.76 to Rs. 230-25 p.a.

(b) Same as against item (a) of the reply furnished.

(c) No instances of wilful destruction of Departmental Plantations are noticed.

The destructions are due to various factors like failure of rains, accidental forest fires, grazing and also by encroachers who grab the lands for purpose of cultivation.